**MVC 689-22 PW :1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 09.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಒಂದನೇ ಎದುರುದಾರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿರುತ್ತಾರೆ, ಸಕಾರಣವಿಲ್ಲದ ಕಾರಣ ಅವರ ಪ್ರಾರ್ಥನೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

**ಪಾಟೀ ಸವಾಲುಃ ಎರಡನೇ ಎದುರುದಾರ ಪರ ಶ್ರೀ ಆರ್ ಆರ್ ಎನ್, ವಕೀಲರಿಂದಃ**

ಅಪಘಾತ ವು ದಿಃ 14.02.2021 ರಂದು ಆಗಿದೆ. ಅಪಘಾತ ದ ನಂತರ ಪರಿಹಾರಕ್ಕೆ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅಪಘಾತ ವಾಗಿ 20 ತಿಂಗಳ ನಂತರ ಅರ್ಜಿ ಸಲ್ಲಿಸಿರುತ್ತೇನೆ, 20 ತಿಂಗಳ ವಿಳಂಬವಾಗಲು ನನಗೆ ಆರಾಮವಾಗಿರಲಿಲ್ಲ. ನಾನು ಹೇಳಿದಂತೆ ಅಪಘಾತವಾಗಿಲ್ಲ ಅಂದರೆ ಸರಿಯಲ್ಲ. ಪೋಲಿಸರ ಜೊತೆ ಶಾಮೀಲಾಗಿ ದಾಖಲೆ ಸೃಷ್ಟಿ ಮಾಡಿ ಕೇಸ ಹಾಕಿರುತ್ತೇನೆ ಅಂದರೆ ಸರಿಯಲ್ಲ. ನಾನು ಚಲಾಯಿಸುತ್ತಿದ್ದ ವಾಹನದ ಮಾಲಿಕ ಮಲ್ಲಪ್ಪ ಶಂಕರೆಡ್ಡಿ. ಸದರಿ ವಾಹನದ ನಂಃ ಕೆಎ-25 /2069 ಇದೆ. ನಾನು ಕುಸುಗಲ್ ದಲ್ಲಿ ಹುಬ್ಬಳ್ಳಿ - ನವಲಗುಂದ ರಸ್ತೆಯ ಬಲಗಡೆಗೆ ಇದ್ದೆನು. ನಾವು ನಿಂತಲ್ಲೆ ವಾಹನ ಚಾಲಕ ಬಂದು ಡಿಕ್ಕಿಪಡಿಸಿದನು. ಪೋಲಿಸ ನಕ್ಷೆ ಪ್ರಕಾರ ನಾನು ರಸ್ತೆಯ ಮೇಲೆ ಬಲಭಾಗಕ್ಕೆ ನಿಂತುಕೊಂಡಿದ್ದೆನು ಅಂದರೆ ಸರಿ. ನಾನು ಹೋಗಲು ನಿಂತುಕೊಂಡಿದ್ದೆನು. ಹುಬ್ಬಳ್ಳಿ ಕಡೆಯಿಂದ ನವಲಗುಂದ ಕಡೆಗೆ ವಾಹನ ಹೊರಟಿತ್ತು. ನಮಗೆ ಎದುರಿಗೆ ಬಂದು ಹೊಡೆದಿರುತ್ತಾನೆ. ನಮ್ಮ ವಾಹನದ ಮಾಲಿಕ ಹಾಗೂ ವಿಮೆದಾರರ ಕಂಪನಿಯನ್ನು ಪಕ್ಷಗಾರನನ್ನಾಗಿ ಮಾಡಿಲ್ಲ ಅಂದರೆ ಸರಿ. ನಮ್ಮ ವಾಹನದ ಮಾಲಿಕ ಹಾಗೂ ವಿಮೆ ಕಂಪನಿಯನ್ನು ಪಕ್ಷಗಾರರನ್ನಾಗಿ ಮಾಡುವುದಿಲ್ಲ. ನನಗೆ ಬೈಕ್ ಚಲಾಯಿಸುಲು ಡಿ ಎಲ್ ಇಲ್ಲ ಅಂದರೆ ಸರಿಯಲ್ಲ. ಕಾರ್ ಹಾಗೂ ಬಸ್ ಚಲಾಯಿಸಲು ಲೈಸೆನ್ಸ ಇದೆ, ಬೈಕ್ ಚಲಾಯಿಸಲು ಲೈಸೆನ್ಸ ಇಲ್ಲ ಅಂದರೆ ಸರಿ. ಕೆಎ-25 ಇ ಎಂ /2069 ನೇದ್ದರ ವಿಮೆ ಪಾಲಿಸಿ ಹಾಜರಪಡಿಸಿರುತ್ತೇನೆ. ದಾಖಲೆಯಲ್ಲಿ ಹಾಜರಪಡಿಸಿಲ್ಲ, ಆದರೆ ನಾನು ವಿಮೆ ಪಾಲಿಸಿಯನ್ನು ಹಾಜರಪಡಿಸಲು ಆಗುವುದಿಲ್ಲ.

**MVC 689-22 PW :1**

ಕೆಎ-25 ಇ ಎಂ /2069 ವಾಹನದ ಮಾಲಿಕರನ್ನು ಮತ್ತು ವಿಮೆ ಪಾಲಿಸಯನ್ನು ಪಕ್ಷಗಾರರನ್ನಾಗಿ ಮಾಡದೆ ಇರುವುದರಿಂದ ಎರಡನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲ ಅಂದರೆ ಸರಿಯಲ್ಲ. ವ್ಯಾಕ್ಸ ಕ್ಯಾಬ್ ಹಾಗುಾ ನಮ್ಮ ವಾಹನಕ್ಕೂ ನಾನು ಹೇಳಿದಂತೆ ಎದುರು-ಬದರು ಡಿಕ್ಕಿಯಾಗಿದ್ದರಿಂದ ಅವರು ಅವಶ್ಯಕ ಪಕ್ಷಗಾರರು ಅಂದರೆ ಸರಿಯಲ್ಲ. ದಾವಾಖಾನೆಯಲ್ಲಿ ಗಡಬಿಡಿಯಲ್ಲಿರುವುದರಿಂದ ಮುಂದಿನ ದೂರು ನೀಡಲು ವಿಳಂಬವಾಗಿದೆ. ಪೋಲಿಸರಿಗೆ ದೂರನ್ನು ಮಲ್ಲಪ್ಪ ಶಂಕರೆಡ್ಡಿ ರವರು ದೂರನ್ನು ನೀಡಿರುತ್ತಾರೆ. ವಾಹನದ ಮಾಲಿಕನಿಗೂ ಸ್ವಲ್ಪ ಗಾಯವಾಗಿತ್ತು. ಅವರು ನಮ್ಮ ಜೊತೆಗೆ ಇದ್ದರು. ಮಲ್ಲಪ್ಪನನ್ನು ಸಾಕ್ಷಿ ಮಾಡಿಸಲು ಆಗುವುದಿಲ್ಲ. ಬೇರೆ ಯಾರ ಕಡೆನಿಯಿಂದಾಗಿದರೂ ಸಾಕ್ಷಿ ಮಾಡಿಸುತ್ತೇನೆ. ಆ ದಿನ ವಾಹನದ ಮೇಲೆ ನಾನು ಹಾಗೂ ಮಲ್ಲಪ್ಪ ಇದ್ದೆವು. ಅಪಘಾತ ದ ದಿನ ನಾವಿಬ್ಬರು ಅಲ್ಲದೇ ಇನ್ನೊಬ್ಬರು ಇದ್ದರು ಅಂದರೆ ಸರಿಯಲ್ಲ. 3 ಜನ ಇದ್ದರೆ ಪರಿಹಾರ ಸಿಗುವುದಿಲ್ಲ ಅಂತಾ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ಇಬ್ಬರೆ ಇದ್ದೇವೆ ಎಂದು ಪೋಲಿಸರ ಜೊತೆ ಶಾಮೀಲಾಗಿ ಸುಳ್ಳು ಕೇಸ ಮಾಡಿರುತ್ತೇವಪಿ ಅಂದರೆ ಸರಿಯಲ್ಲ. ಕೆಎ-01 ಎ 1409 ಮ್ಯಾಕ್ಸಿ ವಾಹನಕ್ಕೆ ಪರ್ಮಿಟ್ ಹಾಗೂ ಫಿಟ್ನೆಸ್ ಪ್ರಮಾಣ ಪತ್ರ ಇರಲಿಲ್ಲ ಅಂದರೆ ಸರಿಯಲ್ಲ. ನಾನು ಚಾಲಕನಾಗಿ ಅಪಘಾತ ಕ್ಕಿಂತ ಮುಂಚೆ ಕೆಲಸ ಮಾಡುತ್ತಿದ್ದೆನು, ನನಗೆ ತಿಂಗಳಿಗೆ 15 ಸಾವಿರ ರೂ. ಕೊಡುತ್ತಿದ್ದರು. ಒಬ್ಬರ ಮಾಲಿಕರ ಬಳಿ ಕೆಲಸ ಮಾಡಿಲ್ಲ. 15 ಸಾವಿರ ರೂ. ಗಳನ್ನು ದುಡಿಯುವ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ನನ್ನ ಹೆಸರಿನಲ್ಲಿ ಹೊಲ ಇಲ್ಲ. ಹೊಲ ಇಲ್ಲ, ಹಾಗೂ ರೈತನಲ್ಲ. ಅಪಘಾತ ವಾದ ನಂತರ ನಾನು ಏನು ದುಡಿಯುವುದಿಲ್ಲ. ನನ್ನ ಹೆಂಡತಿ ಕೂಲಿ ಕೆಲಸಕ್ಕೆ ಹೋಗುತ್ತಾರೆ. ನಾನು ಈ ದಿನ ಬಸ್ಸದಲ್ಲಿ ಬಂದಿರುತ್ತೇನೆ. ನನಗೆ ಆದ ಗಾಯಗಳಿಂದ ಚಾಲನೆ ಮಾಡಲು ತೊಂದರೆ ಇಲ್ಲ ಅಂದರೆ ಸರಿಯಲ್ಲ. ನನಗೆ ಡಿ ಎಲ್ ಇಲ್ಲದ ಕಾರಣ ಎದುರುದಾರ ಕಂಪನಿಯಿಂದ ಯಾವುದೇ ಪರಿಹಾರವನ್ನು ಪಡೆಯಲು ಅರ್ಹರಲ್ಲ ಅಂದರೆ ಸರಿಯಲ್ಲ.

**MVC 689-22** **PW :1**

ಮ್ಯಾಕ್ಸಿ ಕ್ಯಾಬ್ ಗೆ ಪರ್ಮಿಟ್ ಹಾಗೂ ಫಿಟ್ನೆಸ ಇಲ್ಲದ ಕಾರಣ ವಿಮೆ ಕಂಪನಿ ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲ ಅಂದರೆ ಸರಿಯಲ್ಲ. ಅಪಘಾತ ವಾಗಿ 20 ತಿಂಗಳ ನಂತರ ದಾಖಲೆ ಸೃಷ್ಟಿ ಮಾಡಿಕೊಂಡಿದ್ದೇವೆ ಅಂದರೆಸ ರಿಯಲ್ಲ. ನಾವು 3 ಜನ ಇರುವುದರಿಂದ ನಮ್ಮ ತಪ್ಪಿನಿಂದ ಅಪಘಾತ ವಾಗಿದೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕ್ಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.